**O.S. 131-21** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ G V M, ವಕೀಲರಿಂದಃ**

3. ನಾನು ಬಿ ಬಿ ಎ ರವರೆಗೆ ವ್ಯಾಸಂಗ ಮಾಡಿದ್ದೇನೆ. ಅಲ್ಪ ಸ್ವಲ್ಪ ನ್ಯಾಯಾಲಯದ ವಿವರಣೆ ಬಗ್ಗೆ ಮಾಹಿತಿ ಇದೆ. ನಾನು ಬೇರೆ ಕೇಸದಲ್ಲಿ ವಕೀಲರ ಮೂಲಕ ಹಾಜರಾಗಿದ್ದೇನೆ. ಪ್ರತಿವಾದ ಪತ್ರವನ್ನು ಯಾರು ಹಾಕಿದ್ದಾರೆಂದು ಮಾಹಿತಿ ಇಲ್ಲ. ಮಂಜುನಾಥ ತಿರುಮಲಗೌಡ ರವರು 7 ನೇ ಪ್ರತಿವಾದಿ ಪರವಾಗಿ ಜಿ ಪಿ ಎ ದಾರನಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದಾನೆ ಅಂದರೆ ಮಾಹಿತಿ ಇಲ್ಲ. ನಾನು 7 ನೇ ಪ್ರತಿವಾದಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಬೆಂಗಳೂರಿನಲ್ಲಿ ನಮ್ಮ ಮುಖ್ಯ ಕಚೇರಿ ಇದೆ, ಅಲ್ಲಿಂದ ಏನೂ ಮಾಹಿತಿ ಬರುತ್ತದೆ. ಆ ಪ್ರಕಾರ ನಾವು ಕೆಲಸ ಮಾಡುತ್ತೇವೆ. ನಿಡಿ.1 ರ ಆಧಾರದ ಮೇಲೆ ನಾನು ಬರುವದಗಿಂತ ಪೂರ್ವದಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ. ಸದರಿ ಜಿ ಪಿ ಎ ಯನ್ನು 7 ನೇ ಪ್ರತಿವಾದಿ ಇಲ್ಲಿಯವರೆಗೆ ರದ್ದುಪಡಿಸಿಲ್ಲ ಅಂದರೆ ಗೊತ್ತಿಲ್ಲ. 7 ನೇ ಪ್ರತಿವಾದಿ ಬರೆದುಕೊಟ್ಟ ಜಿ ಪಿ ಎ ಯೂ ಈಗಲೂ ಅಸ್ತಿತ್ವದಲ್ಲಿದೆ ಅಂದರೆ ಗೊತ್ತಿಲ್ಲ. ನಿಡಿ.1 ಅಸ್ತಿತ್ವದಲ್ಲಿರುವುದರಿಂದ 7 ನೇ ಪ್ರತಿವಾದಿ ಪರವಾಗಿ ನನಗೆ ಸಾಕ್ಷಿ ನುಡಿಯಲು ಅಧಿಕಾರ ಇಲ್ಲ ಅಂದರೆ ಮಾಹಿತಿ ಇಲ್ಲ.

4. ನಾವು ಖರೀದಿ ಮಾಡಿದ ಆಸ್ತಿ ಟೆನೆಂಟ ಆಸ್ತಿ ಅಂದರೆ ಗೊತ್ತಿಲ್ಲ. ವಾದಿಗಳು, ಪ್ರತಿವಾನಿ 1 ರಿಂದ 6 ರವರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಕಲ್ಲಪ್ಪ ಗದಗೆಪ್ಪ ನವಲೂರ ರವರ ಕಡೆಯಿಂದ ನಾವು ಖರೀದಿ ಮಾಡಿದ್ದೇವೆ. ಕಲ್ಲಪ್ಪನಿಗೆ ಆಸ್ತಿ ಹೇಗೆ ಬಂದಿದೆ ಎಂದು ನಾವು ತಿಳಿದುಕೊಂಡಿಲ್ಲ. ನಾವು ಖರೀದಿ ಮಾಡಿದ ಜಮೀನು ಕಲ್ಲಪ್ಪನಿಗೆ ಅವರ ತಂದೆ ಗದಿಗೆಪ್ಪನ ಕಡೆಯಿಂದ ಬಂದಿದೆ ಅಂದರೆ ಗೊತ್ತಿಲ್ಲ. ಗದಿಗೆಪ್ಪನಿಗೆ ಟೆನೆನ್ಸಿ ನಾತೆಯಿಂದ ಸದರಿ ಜಮೀನು ಬಂದಿದೆ ಅಂದರೆ ಮಾಹಿತಿ ಇಲ್ಲ. ಗದಿಗೆಪ್ಪನಿಗೆ 3 ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಹಾಗೂ ಹೆಂಡತಿ ಇದ್ದರು ಅಂದರೆ ಗೊತ್ತಿಲ್ಲ. ಗದಿಗೆಪ್ಪನ ಮರಣಾನಂತರ ಆತನ 3 ಮಕ್ಕಳ ನಡುವೆ ವಾಟ್ನಿಯಾಗಿದೆ ಅಂದರೆ ಗೊತ್ತಿಲ್ಲ. ವಾಟ್ನಿಯಲ್ಲಿ ದಾವಾ ಆಸ್ತಿಗಳು ಕಲ್ಲಪ್ಪನ ಹಿಸ್ಸಾಗೆ ಬಂದಿವೆ ಅಂದರೆ ಗೊತ್ತಿಲ್ಲ. ಕಲ್ಲಪ್ಪ ನು ಕೆಟ್ಟ ಚಟಗಳಿಗೆ ದಾಸನಾಗಿದ್ದರಿಂದ ಆತನ ಕಡೆಯಿಂದ ಖರೀದಿ ಪತ್ರ ಬರೆಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಾವು ಖರೀದಿ ಮಾಡುವಾಗ ವಾದಿಗಳು ವಯಸ್ಕರಾಗಿದ್ದರು ಅಂದರೆ ಗೊತ್ತಿಲ್ಲ.

**O.S. 131-21** **DW-1**

ವಾದಿಗಳು ಮದುವೆಯಾಗಿ ಹೋದ ನಂತರ ಕಲ್ಲಪ್ಪ ನು ಕೆಟ್ಟ ಚಟಗಳಿಗೆ ದಾಸನಾಗಿದ್ದರಿಂದ ವಾದಿಗಳಿಗೆ ಗೊತ್ತಿಲ್ಲದ ಹಾಗೆ ಖರೀದಿ ಪತ್ರ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಮುಟೇಶನ್ ಖಾತೆ ವಾದಿಗಳಿಗೆ ಬಂಧನಕಾರಿ ಅಲ್ಲ ಅಂದರೆ ಸರಿಯಲ್ಲ. ಖರೀದಿ ಪತ್ರ ಹಾಗೂ ಮುಟೇಶನ್ ವಾದಿಗಳಿಗೆ ತಿಳಿಯದ ಹಾಗೆ ಮಾಡಿಕೊಂಡಿದ್ದೇವೆ ಅಂದರೆ, ಕಾನೂನು ಬದ್ಧವಾಗಿ ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ವಾದಿಗಳಿಗೆ ಬೇರೆ ಪಿತ್ರಾರ್ಜಿತ ಆಸ್ತಿಗಳು ಇಲ್ಲ ಅಂದರೆ ಗೊತ್ತಿಲ್ಲ. ವಾದಿಗಳ ನಷ್ಟ ಮಾಡಲು ನಾವು ಹಾಗೂ ಕಲ್ಲಪ್ಪ ಸೇರಿ ಖೊಟ್ಟಿ ಖರೀದಿ ಪತ್ರ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ವಾದಿಗಳಿಗೆ ಕಾನೂನು ಬದ್ಧ ಹಿಸ್ಸಾ ಇದೆ ಅಂದರೆ ಮಾಹಿತಿ ಇಲ್ಲ. ದಾವಾ ಆಸ್ತಿ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.